**All India Radio: Bangalore**
**National Bulletin In Kannada**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**11.09.2026  7.35 pm**

**<>><><*><><<>**

ಮುಖ್ಯಾಂಶಗಳು

೧. ಜಾಗತಿಕ ನಾವೀನ್ಯತೆ ಹಾಗೂ ಪರಿಹಾರಗಳ ಕೇಂದ್ರವಾಗಿ ಬ್ರಿಕ್ಸ್ ಒಕ್ಕೂಟ ಪರಿವರ್ತನೆ: ಬ್ರಿಕ್ಸ್ ವ್ಯಾಪಾರ ವೇದಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

೨. ನವದೆಹಲಿಯ ಭಾರತ್ ಮಂಟಪಂನಲ್ಲಿ ನಾಳೆಯಿಂದ ಭಾರತದ ಅಧ್ಯಕ್ಷತೆಯಲ್ಲಿ ೧೮ನೇ ಬ್ರಿಕ್ಸ್ ಶೃಂಗಸಭೆ ಆಯೋಜನೆ

೩. ದ್ವಿಪಕ್ಷೀಯ ಸಹಕಾರ ಬಲವರ್ಧನೆ ಕುರಿತು ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸಮಾಲೋಚನೆ

೪. ಕರಾವಳಿ ಅಭಿವೃದ್ಧಿ ಮತ್ತು ಕಡಲ ಆರ್ಥಿಕತೆಗೆ ಸಮಗ್ರ ದೃಷ್ಟಿಕೋನ ಅಗತ್ಯ: ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್

೫. ಜೂನಿಯರ್ ಪುರುಷರ ಏಷ್ಯಾಕಪ್ ಹಾಕಿ ಪಂದ್ಯಾವಳಿ; ಮಲೇಷ್ಯಾ ವಿರುದ್ಧ ಗೆದ್ದು, ಫೈನಲ್ ಪ್ರವೇಶಿಸಿದ ಭಾರತ

**<>><><*><><<>**

ಬ್ರಿಕ್ಸ್ ರಾಷ್ಟ್ರಗಳು ಇಂದು ಜಾಗತಿಕ ನಾವೀನ್ಯತೆ ಮತ್ತು ಹೊಸ ಪರಿಹಾರಗಳ ಪ್ರಮುಖ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ನವದೆಹಲಿಯ ಭಾರತ್ ಮಂಟಪಂನಲ್ಲಿ ಇಂದು ಆಯೋಜಿಸಲಾಗಿದ್ದ ಬ್ರಿಕ್ಸ್ ವ್ಯಾಪಾರ ವೇದಿಕೆಯ ನಾಯಕರ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿಯವರು, ಪ್ರಸ್ತುತ ಬ್ರಿಕ್ಸ್ ಒಕ್ಕೂಟ ವಿಶ್ವದ ಶೇಕಡಾ ೫೦ ರಷ್ಟು ಜನಸಂಖ್ಯೆ, ಶೇಕಡಾ ೪೦ ರಷ್ಟು ಜಿಡಿಪಿ ಹಾಗೂ ಶೇಕಡಾ ೨೫ ಕ್ಕೂ ಹೆಚ್ಚಿನ ಜಾಗತಿಕ ವ್ಯಾಪಾರವನ್ನು ಪ್ರತಿನಿಧಿಸುತ್ತಿದೆ ಎಂದು ತಿಳಿಸಿದರು. ಜಾಗತಿಕ ಜಿಡಿಪಿಯು ಕಳೆದ ಕೆಲವು ವರ್ಷಗಳಲ್ಲಿ ಸುಮಾರು ಎರಡೂವರೆ ಪಟ್ಟು ಬೆಳೆದಿದ್ದರೆ, ಬ್ರಿಕ್ಸ್ ದೇಶಗಳ ಒಟ್ಟು ಜಿಡಿಪಿಯು ಸುಮಾರು ನಾಲ್ಕೂವರೆ ಪಟ್ಟು ಹಿಗ್ಗಿದ್ದು, ವಿಶ್ವದ ಇತರ ದೇಶಗಳಿಗಿಂತ ದುಪ್ಪಟ್ಟು ವೇಗದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸುತ್ತಿದೆ ಎಂದರು. ಜಾಗತಿಕ ಅನಿಶ್ಚಿತತೆಗಳ ನಡುವೆ ಭಾರತವು ಜಾಗತಿಕ ಪ್ರಗತಿ ಮತ್ತು ಸ್ಥಿರತೆಗೆ ವಿಶ್ವಾಸಾರ್ಹ ಶಕ್ತಿಯಾಗಿ ಹೊರಹೊಮ್ಮಿದೆ ಎಂದ ಅವರು, 'ಮೇಕ್ ಇನ್ ಇಂಡಿಯಾ'ದಲ್ಲಿ ಉತ್ಪಾದನೆ ಕೈಗೊಂಡು ಹಾಗೂ ಭಾರತದೊಂದಿಗೆ ನಾವೀನ್ಯತೆಯಲ್ಲಿ ತೊಡಗಿ, ಜಗತ್ತಿಗಾಗಿ ವಿಸ್ತರಿಸುವಂತೆ ಜಾಗತಿಕ ನಾಯಕರಿಗೆ ಕರೆ ನೀಡಿದರು. ಕಡಲ ಮಾರ್ಗಗಳ ಸುರಕ್ಷತೆ ಮತ್ತು ಮುಕ್ತ ಪೂರೈಕೆ ಸರಪಳಿಯನ್ನು ಪ್ರತಿಪಾದಿಸಿದ ಪ್ರಧಾನಿ, ಬ್ರಿಕ್ಸ್ ದೇಶಗಳು ತಮ್ಮ ಸಾಮೂಹಿಕ ಶಕ್ತಿಯನ್ನು ಜಾಗತಿಕ ಸವಾಲುಗಳಿಗೆ ಸೂಕ್ತ ಪರಿಹಾರವನ್ನಾಗಿ ಪರಿವರ್ತಿಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಕಳೆದ ಐದು

ವರ್ಷಗಳಲ್ಲಿ ಜಾಗತಿಕ ಜಿಡಿಪಿಯ ಶೇಕಡಾ ೪೦ ಕ್ಕೂ ಹೆಚ್ಚಿನ ಪಾಲು ಬ್ರಿಕ್ಸ್ ದೇಶಗಳಿಂದಲೇ ಬಂದಿದ್ದು, ಬೃಹತ್ ದೇಶೀಯ ಮಾರುಕಟ್ಟೆಗಳು ಈ ಪ್ರಗತಿಗೆ ಬಲ ನೀಡಿವೆ ಎಂದರು. ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರು, ತಯಾರಿಕೆ, ತಂತ್ರಜ್ಞಾನ ಹಾಗೂ ಮೌಲ್ಯವರ್ಧನೆಯಲ್ಲಿ ಜಾಗತಿಕ ದಕ್ಷಿಣ ರಾಷ್ಟ್ರಗಳು ನಾಯಕತ್ವ ವಹಿಸಬೇಕು ಎಂದು ಕರೆ ನೀಡಿದ್ದಲ್ಲದೆ, ಏಕಪಕ್ಷೀಯ ನಿರ್ಬಂಧಗಳ ಕುರಿತು ಕಳವಳ ವ್ಯಕ್ತಪಡಿಸಿದರು.

**<>><><*><><<>**

೧೮ನೇ ಬ್ರಿಕ್ಸ್ ಶೃಂಗಸಭೆಗೆ ರಾಜಧಾನಿ ನವದೆಹಲಿಯ ಭಾರತ್ ಮಂಟಪಂ ಸರ್ವಸನ್ನದ್ಧವಾಗಿದ್ದು, ನಾಳೆಯಿಂದ ಎರಡು ದಿನಗಳ ಕಾಲ ಜಾಗತಿಕ ಮಟ್ಟದ ಮಹತ್ವದ ಆಯೋಜನೆಗೆ ಸಾಕ್ಷಿಯಾಗಲಿದೆ. ಈ ಶೃಂಗಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ, ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್-ಸಿಸಿ, ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ, ಇರಾನ್ ಅಧ್ಯಕ್ಷ ಮಸೌದ್ ಪೆಝೆಶ್ಕಿಯನ್ ಹಾಗೂ ಅಬುಧಾಬಿಯ ಯುವರಾಜ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್ ಸೇರಿದಂತೆ ಜಗತ್ತಿನ ಪ್ರಮುಖ ನಾಯಕರನ್ನು ಆತಿಥೇಯರಾಗಿ ಬರಮಾಡಿಕೊಳ್ಳಲಿದ್ದಾರೆ. "ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ" ಎಂಬ ಧ್ಯೇಯವಾಕ್ಯದೊಂದಿಗೆ ಭಾರತವು ೨೦೨೬ರ ಬ್ರಿಕ್ಸ್ ಅಧ್ಯಕ್ಷತೆಯ ನೇತೃತ್ವ ವಹಿಸಿಕೊಂಡಿದೆ. ನಾಳೆ ಆರಂಭವಾಗಲಿರುವ ಶೃಂಗಸಭೆಯ ಮೊದಲ ದಿನದಂದು ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ನಾಯಕರಿಗಾಗಿ "ಒಳಗೊಳ್ಳುವಿಕೆಯ ಜಾಗತಿಕ ಆಡಳಿತ ಮತ್ತು ಬಹುಪಕ್ಷೀಯತೆಯ ಸಶಕ್ತೀಕರಣ" ಎಂಬ ವಿಷಯದ ಕುರಿತು ಮಹತ್ವದ ಸಭೆ ನಡೆಯಲಿದೆ. ತದನಂತರ ನಾಯಕರು ಭಾರತ್ ಮಂಟಪಂನಲ್ಲಿ ಆಯೋಜಿಸಲಾಗಿರುವ 'ಭಾರತ್ ಇನ್ನೋವೇಟ್ಸ್ ಎಕ್ಸ್‌ಪೋಸಿಷನ್' ಪ್ರದರ್ಶನವನ್ನು ವೀಕ್ಷಿಸಲಿದ್ದು, ಜಂಟಿಯಾಗಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅಂದು ಸಂಜೆ ಪ್ರಧಾನಿ ಅವರು ಗೌರವಪೂರ್ವಕವಾಗಿ ಆಯೋಜಿಸಲಿರುವ ಔತಣಕೂಟದಲ್ಲಿ ಜಾಗತಿಕ ನಾಯಕರು ಪಾಲ್ಗೊಳ್ಳಲಿದ್ದು, ಶೃಂಗಸಭೆಯ ನಡುವೆಯೇ ಪ್ರಧಾನಿಯವರು ಪ್ರಮುಖ ದೇಶಗಳ ಮುಖ್ಯಸ್ಥರೊಂದಿಗೆ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದಾರೆ. ನಾಡಿದ್ದು, ಪ್ರಧಾನಿಯವರು ಹಾಗೂ ಆಹ್ವಾನಿತ ಪ್ರತಿನಿದಿಗಳು, "ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆ: ಜಾಗತಿಕ ಸಮಗ್ರ ಪ್ರಗತಿಯ ಭವಿಷ್ಯದ ರೂಪುರೇಷೆ" ಎಂಬ ಗೋಷ್ಠಿಯಲ್ಲಿ ಸಮಾಲೋಚನೆ ನಡೆಸಲಿದ್ದಾರೆ.

**<>><><*><><<>**

. ೧೮ನೇ ಬ್ರಿಕ್ಸ್ ಶೃಂಗಸಭೆಯ ಅಂಗವಾಗಿ ಭಾರತದ ಸುಧಾರಿತ ಡೀಪ್‌ಟೆಕ್ ನಾವೀನ್ಯತೆಗಳನ್ನು ಪ್ರದರ್ಶಿಸಲು ಶಿಕ್ಷಣ ಸಚಿವಾಲಯ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಹಯೋಗದೊಂದಿಗೆ ನವದೆಹಲಿಯ ಭಾರತ್ ಮಂಟಪಂನಲ್ಲಿ ಆಯೋಜಿಸಲಾಗಿರುವ ಎರಡು ದಿನಗಳ ಭಾರತ್ ಇನ್ನೋವೇಟ್ಸ್ ಎಕ್ಸ್‌ಪೊಸೆಷನ್ ಪ್ರದರ್ಶನಕ್ಕೆ ಇಂದು ಚಾಲನೆ ದೊರೆತಿದೆ. ಭಾರತದ ಬ್ರಿಕ್ಸ್ ಅಧ್ಯಕ್ಷತೆಯ ಧ್ಯೇಯವಾಕ್ಯವಾದ ಸ್ಥಿತಸ್ಥಾಪಕ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ ಎಂಬ ತತ್ವಕ್ಕೆ ಪೂರಕವಾಗಿ ದೇಶದ ಪ್ರಮುಖ ೩೭ ಡೀಪ್‌ಟೆಕ್ ನವೋದ್ಯಮಗಳು ಹಾಗೂ ತಾಂತ್ರಿಕ ಉದ್ಯಮಗಳು ತಮ್ಮ ನೂತನ ತಂತ್ರಜ್ಞಾನಗಳನ್ನು ಈ ಪ್ರದರ್ಶನದಲ್ಲಿ ಅನಾವರಣಗೊಳಿಸುತ್ತಿವೆ.

<>><><*><><<>

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ನವದೆಹಲಿಯಲ್ಲಿಂದು ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ ರಾಜಕೀಯ, ಆರ್ಥಿಕ, ರಕ್ಷಣೆ, ಇಂಧನ, ಬಾಹ್ಯಾಕಾಶ, ಕೌಶಲ್ಯ, ಸಂಚಾರ ಸೇರಿದಂತೆ ವಿವಿಧ ಕ್ಷೇತ್ರಗಳ ದ್ವಿಪಕ್ಷೀಯ ಸಹಕಾರದ ಪ್ರಗತಿಯನ್ನು ಉಭಯ ನಾಯಕರು ಸಮಗ್ರವಾಗಿ ಪರಾಮರ್ಶಿಸಿದರು. ಇದೇ ವೇಳೆ, ಪಶ್ಚಿಮ ಏಷ್ಯಾ ಹಾಗೂ ಕಪ್ಪು ಸಮುದ್ರದ ಪ್ರಾಂತ್ಯಗಳಲ್ಲಿ ನಡೆಯುತ್ತಿರುವ ಸಂಘರ್ಷಗಳು ಸೇರಿದಂತೆ ಪರಸ್ಪರ ಹಿತಾಸಕ್ತಿಯ ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ತಮ್ಮ ದೃಷ್ಟಿಕೋನಗಳನ್ನು ಹಂಚಿಕೊಳ್ಳಲಾಯಿತು. ಸಂಘರ್ಷಗಳು ಹಾಗೂ ಬಿಕ್ಕಟ್ಟುಗಳ ಪರಿಹಾರಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಯೇ ಸೂಕ್ತ ಮಾರ್ಗ ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿ, ಶಾಂತಿ ಸ್ಥಾಪನೆಯ ಪ್ರಯತ್ನಗಳಿಗೆ ಭಾರತ ಸಂಪೂರ್ಣ ನೆರವು ನೀಡಲು ಸಿದ್ಧವಿದೆ ಎಂದು ತಿಳಿಸಿದರು. ಮತ್ತೊಂದೆಡೆ, ಭಾರತದಲ್ಲಿ ಇದೇ ತಿಂಗಳ ೯ ರಿಂದ ಇಂದಿನವರೆಗೆ ಪ್ರಥಮ ಬಾರಿಗೆ ಆಯೋಜಿಸಲಾಗಿದ್ದ ರಷ್ಯಾದ 'ಇನ್ನೋಪ್ರಾಮ್ ಇಂಡಿಯಾ' ಅಂತಾರಾಷ್ಟ್ರೀಯ ಕೈಗಾರಿಕಾ ಪ್ರದರ್ಶನವನ್ನು ಉಭಯ ನಾಯಕರು ಶ್ಲಾಘಿಸಿದರು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಉಭಯ ದೇಶಗಳ ನಡುವಿನ ವಾಣಿಜ್ಯ ಹಾಗೂ ಕೈಗಾರಿಕಾ ಬಾಂಧವ್ಯವನ್ನು ಮತ್ತಷ್ಟು ವಿಸ್ತರಿಸಲು ಈ ಪ್ರದರ್ಶನ ದಾರಿದೀಪವಾಗಿದೆ ಎಂದ ನಾಯಕರು, ಪ್ರದರ್ಶನ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ಭಾಗವಹಿಸಿದ್ದ ಪ್ರತಿನಿಧಿಗಳು ಹಾಗೂ ಉದ್ಯಮಿಗಳೊಂದಿಗೆ ಸಂವಾದ ನಡೆಸಿದರು. ಇದೇ ವೇಳೆ ರಷ್ಯಾದಲ್ಲಿ ನಡೆಯಲಿರುವ ೨೪ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆಗೆ ಪ್ರಧಾನಿಯವರನ್ನು ಅಧ್ಯಕ್ಷ ಪುಟಿನ್ ಆಹ್ವಾನಿಸಿದ್ದು, ಪ್ರಧಾನಿಯವರು ಈ ಆಹ್ವಾನವನ್ನು ಸ್ವೀಕರಿಸಿದ್ದಾರೆ.

<>><><*><><<>

ಭಾರತದ ಸುದೀರ್ಘ ಕರಾವಳಿ ತೀರವನ್ನು ಪರಿಸರ ವಿಜ್ಞಾನ, ಭದ್ರತೆ, ಆರ್ಥಿಕತೆ, ತಂತ್ರಜ್ಞಾನ ಮತ್ತು ಮಾನವ ಅಭಿವೃದ್ಧಿಯ ಪರಸ್ಪರ ಸಂಯೋಜಿತ ವಲಯವಾಗಿ ಪರಿಗಣಿಸುವ ಅಗತ್ಯವಿದೆ ಎಂದು ಕೇಂದ್ರ ಭೂ ವಿಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಪ್ರತಿಪಾದಿಸಿದ್ದಾರೆ. 'ಕರಾವಳಿ ಪರಿಸರ, ಭದ್ರತೆ ಮತ್ತು ಸುಸ್ಥಿರತೆ-೨೦೨೬' ಕುರಿತ ರಾಷ್ಟ್ರೀಯ ಸಮಾವೇಶವನ್ನು ವರ್ಚುವಲ್ ಮೂಲಕ ಉದ್ದೇಶಿಸಿ ಮಾತನಾಡಿದ ಅವರು, ದೇಶದ ೧೧ ಸಾವಿರದಿಂದ ೧೨ ಸಾವಿರ ಕಿಲೋಮೀಟರ್ ವ್ಯಾಪ್ತಿಯ ಕರಾವಳಿಯು ಸಮುದ್ರ ಸಂಪನ್ಮೂಲ ಹಾಗೂ ಕಡಲ ಆರ್ಥಿಕತೆಯ ಅಭಿವೃದ್ಧಿಗೆ ಅಪಾರ ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದರು. ಭಾರತದ ಕರಾವಳಿ ಹಾಗೂ ಸಮುದ್ರ ಪರಿಸರ ವ್ಯವಸ್ಥೆಯ ಸದ್ಬಳಕೆಗೆ ವೈಜ್ಞಾನಿಕ ಜ್ಞಾನ, ಪರಿಸರ ಸುಸ್ಥಿರತೆ ಮತ್ತು ಆರ್ಥಿಕ ವಿಕಾಸವನ್ನು ಒಳಗೊಂಡ ಸಮಗ್ರ ವಿಧಾನ ಅನಿವಾರ್ಯವಾಗಿದೆ ಎಂದು ಅವರು ಒತ್ತು ನೀಡಿದರು. ದೇಶದ ಬೃಹತ್ 'ಡೀಪ್ ಓಷನ್ ಮಿಷನ್' ಮಹತ್ವವನ್ನು ಒತ್ತಿ ಹೇಳಿದ ಸಚಿವರು, ಭಾರತವು ಸ್ವದೇಶಿ ತಂತ್ರಜ್ಞಾನ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುವ ಜೊತೆಗೆ ಆಳ ಸಮುದ್ರದ ಸಂಪನ್ಮೂಲಗಳ ಶೋಧನೆಯತ್ತ ವೇಗವಾಗಿ ಹೆಜ್ಜೆ ಇಡುತ್ತಿದೆ ಎಂದರು.

<>><><*><><<>

ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯಾನ್ ಇಂದು ನವದೆಹಲಿಗೆ ಆಗಮಿಸಿದರು. ಅವರನ್ನು ಕೇಂದ್ರ ಬಂದರು ಹಡಗು ಮತ್ತು ಜಲಮಾರ್ಗಗಳ ಖಾತೆ ರಾಜ್ಯ ಸಚಿವ ಶಾಂತನು ಠಾಕೂರ್ ಬರಮಾಡಿಕೊಂಡರು.

<>><><*><><<>

ನವದೆಹಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆ-೨೦೨೬ ಕ್ಕೂ ಮುನ್ನ ರಷ್ಯಾ ಒಕ್ಕೂಟದ ಮೊದಲ ಉಪಪ್ರಧಾನಿ ಡೆನಿಸ್ ಮ್ಯಾಂತುರೋವ್ ಅವರನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನವದೆಹಲಿಯಲ್ಲಿಂದು ಭೇಟಿ ಮಾಡಿದ್ದಾರೆ. ಈ ವೇಳೆ, ಉಭಯ ನಾಯಕರು, ಭಾರತ-ರಷ್ಯಾ ನಡುವಿನ ಸುದೀರ್ಘ ಆರ್ಥಿಕ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಹಾಗೂ ಸದೃಢಗೊಳಿಸುವ ಕುರಿತು ಸಮಾಲೋಚನೆ ನಡೆಸಿದ್ದಾರೆ.

<>><><*><><<>

ಚೀನಾದ ಮೋಚಿಯಲ್ಲಿ ನಡೆದ ಜೂನಿಯರ್ ಏಷ್ಯಾಕಪ್ ಹಾಕಿ ಪಂದ್ಯಾವಳಿಯ ಮೊದಲನೇ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಜೂನಿಯರ್ ಪುರುಷರ ತಂಡ, ಮಲೇಷಿಯಾ ತಂಡವನ್ನು ೩-೧ ಗೋಲುಗಳ ಅಂತರದಿಂದ ಮಣಿಸಿ, ಫೈನಲ್‌ನಲ್ಲಿ ಸ್ಥಾನ ಭದ್ರಪಡಿಸಿಕೊಂಡಿದೆ. ಭಾರತೀಯ ತಂಡ ನಾಯಕ ಅನ್ಮೋಲ್ ಎಕ್ಕಾ ೨ ಗೋಲು ಗಳಿಸಿದರೆ, ಸುಖ್ವಿಂಧರ್ ೧ ಗೋಲು ಗಳಿಸಿದರು. ೫ ಬಾರಿ ಚಾಂಪಿಯನ್ ಭಾರತ ತಂಡ, ಚೀನಾ ತೈಪೆಯನ್ನು ಎ ಗುಂಪಿನ ಪಂದ್ಯದಲ್ಲಿ ೧೫-೦ ಅಂತರದ ಭರ್ಜರಿ ಗೆಲುವಿ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿತ್ತು. ಇನ್ನು ಮಹಿಳಾ ವಿಭಾಗದಲ್ಲಿ ನಾಳೆ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಭಾರತೀಯ ಜೂನಿಯರ್ ಮಹಿಳಾ ತಂಡ, ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**